# ನವಸಮಾಜ : ಯುವಜನತೆಯ ಪಾತ್ರ

ಹಳೇಕೋಟೆ ಎನ್. ರಮೇಶ್

**ವೈ**ಜ್ಞಾನಿಕವಾಗಿ ನಾವು ಪ್ರಗತಿಪರರಾಗುತ್ತಿದ್ದಂತೆ ಬಡತನ, ಹಸಿವು, ನಿರುದ್ಯೋಗ, ದರೋಡೆ, ಸುಲಿಗೆ, ಅಪಹರಣ, ಭ್ರಷ್ಟಾಚಾರ, ಮಾದಕದ್ರವ್ಯಗಳ ಸೇವನೆ ಸರ್ವವ್ಯಾಪಿಯಾಗುವ ದರೊಂದಿಗೆ ನಮ್ಮ ನೈತಿಕ ಅಧಃಪತನವೂ ತೀವ್ರಗತಿಯಿಂದ ನಡೆಯುತ್ತಿರುವುದು ಶೋಚನೀಯವಾಗಿದೆ.

ಒಂದು ನಾಡಿನ ಪ್ರಗತಿ ಹಾಗೂ ಭವಿಷ್ಯ ಅಲ್ಲಿನ ಯುವ ಜನಾಂಗದ ಕರ್ತೃತ್ವಶಕ್ತಿಯನ್ನವಲಂಬಿಸಿದೆ. ಆದ್ದರಿಂದ ಯುವ ಶಕ್ತಿ ನಿಂತ ನೀರಾಗದೆ ಹರಿಯುವ ನೀರಾಗಬೇಕು. ಯಾರ ಹಂಗೂ ಇಲ್ಲದ ನಿರಂಕುಶ ಅಸ್ತಿತ್ವದ ತಮ್ಮ ಧೋರಣೆಯಿಂದ ಯುವಶಕ್ತಿ ಹೊರಬಂದು, ಯುವಕರು ಹಾಗೂ ಹಿರಿಯರ ನಡುವಿನ ಅಂತರ ತೊಲಗುವುದರೊಂದಿಗೆ, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ನಾವೆಲ್ಲರೂ ಭಾಗಿಯಾಗಬೇಕಾಗಿದೆ.

ಇಂದು ಯುವಜನತೆ ರಾಷ್ಟ್ರನಿರ್ಮಾಣ ಕಾರ್ಯದಿಂದ ವಿಚಲಿತರಾಗಿರುವುದರಿಂದ, ಪೊಳ್ಳು ಆಶ್ವಾಸನೆಗಳನ್ನು ನೀಡು ವುದರೊಂದಿಗೆ ಮುಗ್ಧ ಜನರನ್ನು ದಾರಿ ತಪ್ಪಿಸುತ್ತಿರುವ ಪ್ರಜಾಪ್ರತಿನಿಧಿಗಳು, ಭ್ರಷ್ಟಾಚಾರಿಗಳಾದ ಅಧಿಕಾರಿಗಳು, ಮಾದಕವ್ಯಸನಿಗಳು, ಸ್ವಜನಪಕ್ಷಪಾತ ನಡೆಸುವವರು ಎಲ್ಲೆಡೆ ತಾಂಡವವಾಡುತ್ತಿದ್ದಾರೆ. ಇದರಿಂದಾಗಿ ನಮ್ಮ ನಾಡಿನಲ್ಲಿ ಅನಾರೋಗ್ಯಕರವಾದ ವಾತಾವರಣ ನಿರ್ಮಾಣಗೊಂಡಿದೆ ಎನ್ನಬಹುದು.

ಧೂಮಪಾನ ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬುದರ ಸ್ಪಷ್ಟ ಅರಿವಿದ್ದರೂ, ಈ ದುಶ್ಚಟವನ್ನು ಬಿಡಲೊಪ್ಪದ ಧೂಮಪಾನಿಗಳನ್ನು ಮತ್ತು ವರದಕ್ಷಿಣೆಯು ಹೆಣ್ಣು ಹೆತ್ತವರಿಗೆ ಕಂಟಕ ಎಂಬುದನ್ನು ತಿಳಿದೂ ಮಾರಾಟದ ವಸ್ತುಗಳಾಗಬಯಸುವ ವಿದ್ಯಾವಂತ ಯುವಕರನ್ನು ಎಲ್ಲೆಡೆ ಕಾಣುವಾಗ, ಆತ್ಮಸ್ಥೈರ್ಯ ಮತ್ತು ಚಾರಿತ್ರ್ಯವನ್ನು ವಿದ್ಯಾರ್ಥಿಗಳಲ್ಲಿ ರೂಪಿಸುವಲ್ಲಿ ವಿಫಲವಾದ ನಮ್ಮ ಶಿಕ್ಷಣಕ್ರಮದ ಬಗ್ಗೆ ಮರುಕವುಂಟಾಗುತ್ತದೆ.

"ಯಾವ ವ್ಯಕ್ತಿ ಉಡುಪೇ ತನ್ನ ಜೀವನದ ಮುಖ್ಯ ಅಂಶ ವೆಂದು ತಿಳಿಯುತ್ತಾನೋ, ಆ ವ್ಯಕ್ತಿಯ ಬೆಲೆ ಭವಿಷ್ಯತ್ತಿನಲ್ಲಿ ಆತನ ಉಡುಪಿನ ಬೆಲೆಗಿಂತಲೂ ಹೆಚ್ಚಾಗುವುದಿಲ್ಲ" ಎನ್ನುವ ಎಚ್ಚರಿಕೆಯ ನುಡಿಯ ಅರ್ಥವನ್ನು ತಿಳಿಯದೆ, ಸರಳತೆ ಯನ್ನು ಮೈಗೂಡಿಸಿಕೊಳ್ಳದೆ, ನಿರರ್ಥಕವಾದ ಫ್ಯಾಷನ್‌ಗೆ ಬಲಿ ಯಾಗುತ್ತಾ, ಆಡಂಬರದ ಆಟಾಟೋಪದ ಜೀವನವನ್ನು ತಮ್ಮದಾಗಿಸಿಕೊಳ್ಳುತ್ತಿರುವ ಹೆಣ್ಣುಮಕ್ಕಳು ನೈತಿಕ ಅವನತಿಯತ್ತ ಸಾಗುತ್ತಿರುವುದು ವಿಷಾದಕರ. ನಮ್ಮ ಸಂಸ್ಕೃತಿಯು ನಮ್ಮ ಆಚಾರ, ವಿಚಾರ, ಗುಣಗಳ ಸಂಕೇತ ಎಂಬುದನ್ನು ಮನಗಂಡು ಉತ್ತಮ ಗುಣಗಳನ್ನು ನಮ್ಮದಾಗಿಸಿಕೊಂಡು, ಇತರರಿಗೆ ಮಾದರಿಯಾಗಿ ಜೀವನ ಸಾಗಿಸುವ ನಿಟ್ಟಿನತ್ತ ನಾವು ಹೆಜ್ಜೆ ಇಡಬೇಕಾಗಿದೆ.

ರಾಷ್ಟ್ರದ ನೇತಾರರ ಆದರ್ಶಗಳನ್ನು ಪಾಲಿಸುವುದಕ್ಕಿಂತಲೂ, ದುಂದು ವೆಚ್ಚಮಾಡಿ ಅವರ ಶತಮಾನೋತ್ಸವಗಳನ್ನು ಆಚರಿಸು ವತ್ತ ನಾವು ಅಧಿಕ ಗಮನವನ್ನು ಹರಿಸುತ್ತಿರುವುದು ವಿಪರ್ಯಾಸ! ಮಾನವರನ್ನು ಬದಲಾಯಿಸಲು ಪ್ರತಿಯೊಬ್ಬರೂ ಆಲೋಚಿಸುತ್ತಾರೆ ಯಾದರೂ, ತಮ್ಮನ್ನು ಬದಲಾಯಿಸಿಕೊಳ್ಳುವ ನಿಟ್ಟಿನಲ್ಲಿ ಯಾರೂ ಯೋಚಿಸುತ್ತಿಲ್ಲವಾದ್ದರಿಂದಲೇ ಸಮಸ್ಯೆಗಳು ಹೆಚ್ಚಾಗುತ್ತಾ ಪ್ರೀತಿ–ಪ್ರೇಮಗಳು ಕಾಣದಾಗಿ ಸಂಬಂಧಗಳು ಕೃತಕವಾಗತೊಡಗಿವೆ. ವ್ಯವಸ್ಥೆಯನ್ನು ಬದಲಾಯಿಸಬೇಕಾದ ಅಗತ್ಯತೆಯ ಕುರಿತಾಗಿ ಎಲ್ಲರೂ ಮಾತನಾಡುತ್ತಿದ್ದರೂ, ಈ ದಿಸೆಯತ್ತ ಮುಂದಡಿ ಇಡುವವರು ಕಂಡುಬರುತ್ತಿಲ್ಲ!

ದ್ವಿತೀಯ ಮಹಾಯುದ್ಧದಲ್ಲಿ ಭಾರೀ ನಷ್ಟವನ್ನು ಅನುಭವಿಸಿದ ಜಪಾನ್ ಮತ್ತು ಜರ್ಮನಿ ರಾಷ್ಟ್ರಗಳು ಮತ್ತು ವಿಶ್ವದಲ್ಲಿಯೇ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಚೀನಾ – ಇವುಗಳಲ್ಲಿನ ಯುವ ಜನತೆ, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಶಿಸ್ತು ಮತ್ತು ಶುಚಿತ್ವಕ್ಕೆ ಪ್ರಾಮುಖ್ಯ ನೀಡಿ, ಜನಹಿತ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ಈ ರಾಷ್ಟ್ರಗಳು ಶೀಘ್ರಗತಿಯಲ್ಲಿ ಪ್ರಗತಿ ಕಂಡಿವೆ ಎಂಬುದನ್ನು ಮರೆಯಲಾಗದು.

ಹಳ್ಳಿಗಳ ಉದ್ಧಾರದ ಮೂಲಕ ನವಸಮಾಜದ ನಿರ್ಮಾಣ ಮಾಡುವುದರೊಂದಿಗೆ, ನಮ್ಮ ರಾಷ್ಟ್ರವನ್ನು ಪ್ರಗತಿಯೆಡೆಗೆ ಸಾಗಿಸು ವಲ್ಲಿ, ನಮ್ಮ ಯುವಜನಾಂಗದ ಪಾತ್ರ ಅತ್ಯವಶ್ಯವಾಗಿದೆ. ಯುವ ಜನಾಂಗವು ಈ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರೊಂದಿಗೆ ತಾನೂ ಎಲ್ಲರೊಡನೆ ಕೂಡಿ ಬೆಳೆಯುತ್ತಾ, ಸರ್ವರ ಹಿತದಲ್ಲಿ ಬೆಳಕು ಕಾಣುತ್ತಾ, ಎಲ್ಲರ ಶಾಂತಿ ಸ್ನೇಹದೊಂದಿಗೆ, ದ್ವೇಷರಹಿತವಾದ ನವಜೀವನವನ್ನು ನಿರ್ಮಾಣಮಾಡಿಕೊಳ್ಳಬೇಕು. ಅಂಥ ಕೂಡಿ ಬಲಗೊಳ್ಳುವ ಆರೋಗ್ಯಕರವಾದ ವಾತಾವರಣ ನಮ್ಮ ನಾಡಿನಲ್ಲಿ ಇಂದು ರೂಪು ತಳೆಯಬೇಕಾಗಿದೆ. ಊರಿನ ಗಲ್ಲಿಗಳಲ್ಲಿ ಮದ್ಯದಂಗಡಿಗಳು, ಜೂಜು, ಕೋಮುದಳ್ಳುರಿ, ಶೋಷಣೆ, ಆರ್ಥಿಕ ಅಸಮಾನತೆ, ಅಶಿಸ್ತು, ಅಶಾಂತಿ, ಅಪರಾಧಗಳು ನಶಿಸುವುದರೊಂದಿಗೆ ಸುಸಜ್ಜಿತ

ಮೂಡಿಗೆರೆಯಲ್ಲಿ ವಾಸಿಸುತ್ತಿರುವ ಲೇಖಕರು ವೃತ್ತಿಯಲ್ಲಿ ಕಾಫಿ ಬೆಳೆಗಾರರು. ಆದರೆ ಪ್ರವೃತ್ತಿಯಲ್ಲಿ ಸಾಹಿತ್ಯ ಪರಿಚಾರಕರು, ಸಂಘಟನಕಾರರು ಮತ್ತು ಉತ್ತಮ ಲೇಖಕರು.

ಆಸ್ಪತ್ರೆಗಳು, ಶಾಲೆಗಳು, ಶೌಚಾಲಯಗಳು, ರಸ್ತೆಗಳು, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ವ್ಯವಸ್ಥೆ ನಿರ್ಮಾಣವಾಗಿ, ಪ್ರಗತಿದಾಯಕ ಬದಲಾವಣೆಗಳನ್ನು ನಾವು ನಮ್ಮದಾಗಿಸಿಕೊಳ್ಳಬೇಕಾಗಿದೆ.

ಸರ್ವರೂ ಆರೋಗ್ಯವಂತರಾಗಿದ್ದು, ಊರಿನಲ್ಲಿ ಶಾಂತಿಯುತವಾದ ವಾತಾವರಣದೊಂದಿಗೆ ಪ್ರಗತಿಯತ್ತ ನಾವು ದಾಪುಗಾಲಿರಿಸಬೇಕಾದರೆ ಊರಿನ ಸಮಸ್ತ ಜನರನ್ನೂ ಅಕ್ಷರಸ್ಥರನ್ನಾಗಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಸಿವು, ಬಡತನ, ಅಜ್ಞಾನದಿಂದ ನರಳುತ್ತಿರುವ ನಮ್ಮವರ ಅಭಿವೃದ್ಧಿಗೆ ಕಿಂಚಿತ್ತೂ ಶ್ರಮಿಸದಿದ್ದಲ್ಲಿ, ತಾವು ಪಡೆದಿರುವ ವಿದ್ಯೆ ನಿರರ್ಥಕ ಎಂಬುದನ್ನರಿತು, ವಿದ್ಯಾವಂತರೆಲ್ಲರೂ ತಮ್ಮನ್ನು ನಾಡಿನ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಯುವಜನತೆ ವರದಕ್ಷಿಣೆ ಪಡೆದು ಖರೀದಿಯ ವಸ್ತುಗಳಾಗದೆ, ಮಾದಕವ್ಯಸನಿಗಳಾಗದೆ, ವೈವಿಧ್ಯತೆಯಲ್ಲಿಯೂ ಏಕತೆಯನ್ನು ತಮ್ಮದಾಗಿಸಿಕೊಂಡು, ತಾವು ಇತರರಿಗೆ ಬೋಧಿಸುವ ಆದರ್ಶಗಳನ್ನು ಸ್ವತಃ ಪಾಲಿಸಿದ್ದೇ ಆದಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಯಶಸ್ಸು ನಮ್ಮದಾಗುವುದರಲ್ಲಿ ಸಂದೇಹವೇ ಇಲ್ಲ.

ನಾಡಿನ ಸರ್ವರೂ ಸಾಕ್ಷರರಾಗುವುದರೊಂದಿಗೆ, ಎಲ್ಲರೂ ತಮ್ಮ ಹಕ್ಕುಗಳನ್ನೂ, ಕರ್ತವ್ಯಗಳನ್ನೂ, ಸಂಪನ್ಮೂಲಗಳ ಸದ್ಬಳಕೆಯನ್ನೂ, ನಿಸರ್ಗದ ಮಹತ್ವವನ್ನೂ ಅರಿಯಬೇಕು. ಆಗ ಅವರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಯುವುದು. ಸ್ವಚ್ಛತೆ, ಶಿಸ್ತು ಮತ್ತು ಗುಣ, ಆರೋಗ್ಯ, ನಿಸ್ವಾರ್ಥತೆ, ಸಹಕಾರ, ಕರ್ತವ್ಯಪ್ರಜ್ಞೆ, ಸಮಯಪ್ರಜ್ಞೆ, ಗೃಹ ಕೈಗಾರಿಕೆಗಳು, ಪರಿಸರ ಮಾಲಿನ್ಯ ನಿಯಂತ್ರಣ, ಉಳಿತಾಯದ ಮಹತ್ವಗಳನ್ನು ಜನರಿಗೆ ತಿಳಿಯಪಡಿಸಿ, ಅವುಗಳನ್ನು ತಾವೂ ಅರಿತುಕೊಂಡು, ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಯುವಜನತೆ ಭಾಗಿಯಾಗಬೇಕಾಗಿದೆ. ಜಾತಿಭೇದವನ್ನು ಅಳಿಸಿ, ಭ್ರಷ್ಟಾಚಾರದ ವಿರುದ್ಧ ಕಹಳೆ ಊದಬೇಕಾಗಿದೆ. ಪ್ರಜಾಪ್ರತಿನಿಧಿಗಳನ್ನು ಆರಿಸುವಾಗ ಯೋಗ್ಯರೂ, ವಿದ್ಯಾವಂತರೂ, ಸಚ್ಚಾರಿತ್ರ್ಯವಂತರೂ, ಪ್ರಜೆಗಳ ಹಿತಕ್ಕಾಗಿ ದುಡಿಯಬಲ್ಲವರೂ ಆದಂಥವರನ್ನು ಆರಿಸುವಂತೆ ಜನರಿಗೆ ಅರಿವು ಮೂಡಿಸಬೇಕಾಗಿದೆ. ಮುಖ್ಯವಾಗಿ ಈ ಕೃತ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಾಗ ತಾವು ಎಲ್ಲರಿಗಿಂತಲೂ ಮೇಧಾವಿಗಳೆಂಬ, ಹೆಚ್ಚಿನವರೆಂಬ ಅಹಂಕಾರ ಮನೋಭಾವ ನಮ್ಮ ಯುವಜನತೆಯಲ್ಲಿ ಇರಬಾರದು. ಆಗ ನವಸಮಾಜದ ನಿರ್ಮಾಣ ಕಾರ್ಯದಲ್ಲಿ ಯಾವ ತೆರನಾದ ತೊಡಕೂ ಉಂಟಾಗದು.

ನಮ್ಮ ಜೀವನಕ್ಕೆ ನಾನಾ ಅನುಕೂಲತೆಗಳನ್ನು ಒದಗಿಸಿರುವ ಸಮಾಜಕ್ಕೆ ಕೈಲಾದಷ್ಟು ಸೇವೆ ಮಾಡುವುದು ಪ್ರಜೆಗಳಾದ ನಮ್ಮ ಕರ್ತವ್ಯ ಎಂಬ ಪ್ರಾಮಾಣಿಕ ಮನೋಭಾವದಿಂದ ಯುವಜನತೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿದ್ದೇ ಆದಲ್ಲಿ ನಾಡಿನ ಉದ್ಧಾರದೊಂದಿಗೆ ನವಸಮಾಜದ ನಿರ್ಮಾಣವೂ ಸಾಧ್ಯ.

ಯೋಗ್ಯ ಶಿಕ್ಷಣ ಮತ್ತು ಆರ್ಥಿಕ ಸುಭದ್ರತೆ ದೊರೆತದ್ದೇ ಆದಲ್ಲಿ ಯುವಜನತೆ ರಾಷ್ಟ್ರನಿರ್ಮಾಣ ಕಾರ್ಯದಿಂದ ವಿಚಲಿತರಾಗಲಾರರು. ಇಂದು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಮತ್ತು ಚಾರಿತ್ರ್ಯಗಳನ್ನು ರೂಪಿಸುವಲ್ಲಿ ನಮ್ಮ ಶಿಕ್ಷಣ ಕ್ರಮ ವಿಫಲವಾಗಿದೆ. ಸ್ವಜನಪಕ್ಷಪಾತ, ತಾರತಮ್ಯ ಮತ್ತು ರಾಜಕೀಯ ನಮ್ಮ ಶಿಕ್ಷಣ ಕ್ಷೇತ್ರದಲ್ಲೂ ಸರ್ವವ್ಯಾಪಿಯಾಗಿರುವುದು ಘೋರ ದುರಂತವೇ ಸರಿ! ನಮ್ಮ ಪರೀಕ್ಷಾ ಕ್ರಮವು ವಿದ್ಯಾರ್ಥಿಯ ನೆನಪಿನ ಮಾಪನವಾಗಿ ರೂಪು ತಳೆದಿದೆಯೇ ಹೊರತು ಆತನ ಸಾಮರ್ಥ್ಯದ ಅಳತೆಗೋಲಾಗದಿರುವುದು ಎಂಥ ವಿಪರ್ಯಾಸ! ಇದರಿಂದಾಗಿ ಫಲಿತಾಂಶಗಳು ವಿದ್ಯಾರ್ಥಿಯ ನಿಜವಾದ ಸಾಮರ್ಥ್ಯವನ್ನು ಪ್ರತಿಬಿಂಬಿಸುವಲ್ಲಿ ವಿಫಲವಾಗಿದೆಯೆಂದರೆ ತಪ್ಪಾಗಲಾರದು. ಇದರ ಪರಿಣಾಮವಾಗಿ ಇಂದು ವಿದ್ಯಾರ್ಥಿಗಳು ವಿಷಯವನ್ನು ಅರ್ಥಮಾಡಿಕೊಳ್ಳುವತ್ತ ಹೆಚ್ಚಿನ ಕಾಳಜಿ ವಹಿಸದೆ, ಪರೀಕ್ಷೆಗಳಲ್ಲಿ ಅಂಕಗಳನ್ನು ಗಳಿಸಲು ಅನುವಾಗುವಂತೆ ಮಾತ್ರವೇ ಅಧ್ಯಯನ ಮಾಡುತ್ತಾರೆ. ಹೀಗಾಗಿ ಜೀವನದಲ್ಲಿ ಒಳಿತು, ಕೆಡುಕುಗಳನ್ನು ವಿವೇಚಿಸಲಾರದವರಾಗಿ, ಸಂಕಷ್ಟದಲ್ಲಿ ಸಿಲುಕುತ್ತಾರೆ!

ಇಂದಿನ ಗ್ರಾಮೀಣ ಯುವಕರು ವ್ಯವಸಾಯದ ಕಡೆಗೆ ಗಮನ ಕೊಡದೆ ನಗರದತ್ತ ವಲಸೆ ಹೋಗುತ್ತಿದ್ದಾರೆ. ಅದಕ್ಕೂ ಕಾರಣವಿದೆ. ಈಗ ಕೃಷಿಯ ಮೂಲಕ ಅವರು ಬದುಕು ಸಾಗಿಸುವುದು ಕಷ್ಟಕರವಾಗಿದೆ. ಪ್ರಕೃತಿ ವಿಕೋಪ, ಮಾರುಕಟ್ಟೆಯಲ್ಲಿ ಏರುಪೇರು, ಸಕಾಲದಲ್ಲಿ ಆರ್ಥಿಕ ನೆರವು ಸಿಗದಿರುವುದು – ಇವು ಅದಕ್ಕೆ ಕಾರಣಗಳಾಗಿವೆ. ಗ್ರಾಮೀಣ ಕಾರ್ಮಿಕರು ಸಹ ಪಟ್ಟಣದ ಕಡೆ ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ. ಇದನ್ನೆಲ್ಲಾ ನಿಯಂತ್ರಿಸಲು ಗ್ರಾಮೀಣ ರೈತರು, ಕಾರ್ಮಿಕರು, ಯುವಕರು – ಇವರೆಲ್ಲರ ಬದುಕಿಗೆ ಪೂರಕವಾಗುವಂಥ ಎಲ್ಲಾ ಸೌಲಭ್ಯಗಳೂ ಗ್ರಾಮಗಳಲ್ಲಿಯೇ ದೊರೆತರೆ ಗ್ರಾಮೀಣ ಯುವಕರು ಹಳ್ಳಿಗಳಲ್ಲಿಯೇ ಉಳಿದುಕೊಳ್ಳಬಹುದು. ಈ ಯತ್ನದಲ್ಲಿ ಎಲ್ಲರ ಸಹಕಾರ ಅಗತ್ಯ.

ರಾಷ್ಟ್ರನಿರ್ಮಾಣದಲ್ಲಿ ನಗರ–ಗ್ರಾಮೀಣ ಯುವಜನಾಂಗ ಶ್ರದ್ಧೆ ವಹಿಸಿದ್ದೇ ಆದಲ್ಲಿ ಪ್ರಗತಿದಾಯಕ ಬೆಳವಣಿಗೆ ನಮ್ಮದಾಗುವುದರಲ್ಲಿ ಸಂದೇಹವೇ ಇಲ್ಲ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಯುವಜನತೆಯಲ್ಲಿನ ನೈತಿಕ ಅಧಃಪತನವನ್ನು ನಾವು ತಡೆಯಬೇಕು. ಅದಕ್ಕಾಗಿ ಆಧ್ಯಾತ್ಮಿಕ ವಿಚಾರಗಳ ಪರಿಚಯ ಅತ್ಯಗತ್ಯ. ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯಗಳಲ್ಲಿ ಆಧ್ಯಾತ್ಮಿಕತೆ ಹಾಸುಹೊಕ್ಕಾಗಿದೆ; ಮಹಾಪುರುಷರ ಜೀವನಚರಿತ್ರೆಗಳು, ರಾಮಾಯಣ ಮಹಾಭಾರತಗಳ ಕತೆಗಳು, ಭಗವದ್ಗೀತೆ ಮತ್ತು ಉಪನಿಷತ್ತುಗಳನ್ನು ಸರಳ ಭಾಷೆಯಲ್ಲಿ ಬೋಧಿಸುವುದು, ದಿವ್ಯತ್ರಯರ ಜೀವನ ಮತ್ತು ಸಂದೇಶ – ಇವೆಲ್ಲದರಲ್ಲಿ ನಮ್ಮ ಯುವಕರು ಅಷ್ಟಿಷ್ಟು ಜ್ಞಾನವನ್ನು ಪಡೆದರೂ ಕೂಡ, ಎಷ್ಟೋ ಪರಿವರ್ತನೆ ಆಗುವುದರಲ್ಲಿ ಸಂದೇಹವಿಲ್ಲ. ಅದನ್ನು ಮಾಡುವವರು ಯಾರು? ನಾವು, ನೀವು ಅಲ್ಲವೇ?